**OS.No**.91/2022 **PW**-1

**ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು 2 ರಿಂದ 5, 7 ರಿಂದ 13 ಮತ್ತು 16ನೇ ಪ್ರತಿವಾದಿಗಳ ಪರ ಶ್ರೀ. ಯು.ಆರ್.ಎಸ್. ವಕೀಲರಿಂದಃ**

ನನಗೆ ಈಗ 65 ವರ್ಷ ವಯಸ್ಸು. ನನ್ನ ಮದುವೆಯಾಗಿ 25 ವರ್ಷಗಳಾಗಿವೆ. ನನ್ನ ಗಂಡನಿಗೆ ಹೊಳೆನರಸೀಪುರದಲ್ಲಿ 1 ಎಕರೆ 38 ಗುಂಟೆ, ಹುಲ್ಲಹಳ್ಳಿ ಬಾರೇ ಗ್ರಾಮದಲ್ಲಿ 1 ಎಕರೆ 30 ಗುಂಟೆ, ಹೊಳೆನರಸೀಪುರದ ಯಲ್ಲಮ್ಮ ದೇವಸ್ಥಾನದ ರಸ್ತೆ, ಅಂಬೇಡ್ಕರ್ ನಗರದಲ್ಲಿ ಹೆಂಚಿನ ಮನೆ ಇದೆ. ಹೊಳೆನರಸೀಪುರ ಚಾಗಹಳ್ಳಿ ಗ್ರಾಮದ ಹತ್ತಿರ ಮುಕ್ಕಾಲು ಎಕರೆ ಜಮೀನು ನನ್ನ ಗಂಡನ ಹೆಸರಿನಲ್ಲಿದೆ. ಆಲದಹಳ್ಳಿ ಗ್ರಾಮದಲ್ಲಿ ನನ್ನ ಗಂಡನ ಸ್ವಂತ ಆಸ್ತಿ 3 ಎಕರೆ ಇದೆ. ಮದುವೆಯಾದಾಗ ನನ್ನ ಗಂಡನಿಗೆ 25 ವರ್ಷ ವಯಸ್ಸಾಗಿದ್ದವು. ನನ್ನ ಮದುವೆಯಾಗಿ ಮಕ್ಕಳಾದ ನಂತರ ಆಲದಹಳ್ಳಿಯ ಜಮೀನು ನನ್ನ ಗಂಡನ ಹೆಸರಿಗೆ ಮಂಜೂರಾಗಿರುತ್ತದೆ. ಜಮೀನು ಮಂಜೂರಾದಾಗ ನನ್ನ ಗಂಡನಿಗೆ 30 ವರ್ಷ ವಯಸ್ಸಾಗಿದ್ದವು.

ನನ್ನ ಗಂಡನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದರಖಾಸ್ತು ಸಲುವಾಗಿ ತಹಸೀಲ್ದಾರ್ ಕಚೇರಿಗೆ ಅರ್ಜಿ ಕೊಟ್ಟಿದ್ದು, ಅದರಲ್ಲಿರುವ ಸಹಿ ನನ್ನ ಗಂಡನದ್ದೆ ಎಂದರೆ ಹೌದು. ಸಾಕ್ಷಿ ದರಖಾಸ್ತು ಅರ್ಜಿಯಲ್ಲಿರುವ ತನ್ನ ಗಂಡನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. (ಆದರೆ ಅದು ಜೆರಾಕ್ಸ್ ಪ್ರತಿಯಾಗಿದ್ದರಿಂದ ಅದನ್ನು ನಿಶಾನೆಗೊಳಿಸಿರುವುದಿಲ್ಲ.) ದರಖಾಸ್ತು ಸಲುವಾಗಿ ಅರ್ಜಿ ಕೊಡುವ ಸಮಯಕ್ಕೆ ನಮ್ಮ ಕುಟುಂಬದಲ್ಲಿ ನಾನು, ನನ್ನ ಗಂಡ ಮಾತ್ರ ಇದ್ದೆವು. ದರಖಾಸ್ತು ಅರ್ಜಿಯಲ್ಲಿ ನನ್ನ ಗಂಡನಿಗೆ 21 ವರ್ಷ ಎಂದು ನಮೂದು ಇದೆ ಎಂದರೆ ಸಾಕ್ಷಿ ಅದು ಸುಳ್ಳು ಅವರಿಗೆ 35 ವರ್ಷಗಳ ಮೇಲೆ ಆಗಿದ್ದವು ಎಂದು ನುಡಿಯುತ್ತಾರೆ.

ದರಖಾಸ್ತು ಅರ್ಜಿಯಲ್ಲಿ ನನ್ನ ಗಂಡ ತಮ್ಮ ಕುಟುಂಬದಲ್ಲಿ ತಾನು, ಪ್ರತಿವಾದಿ ನಂ.2, 7 ಮತ್ತು 12 ರವರು ಇರುತ್ತೇವೆ ಎಂದು ಬರೆಸಿದ್ದಾರೆ ಎಂದರೆ ಸಾಕ್ಷಿ ಅವರು ಯಾರು ನಮ್ಮಾಟ್ಟಿಗೆ ಇರಲಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹಾ ದರಖಾಸ್ತು ಜಮೀನಿನಲ್ಲಿ ನಾನು ಮತ್ತು ಪ್ರತಿವಾದಿಯರು ಅನುಭವ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನೀವು ಜಮೀನುಗಳಿಗೆ ಸಂಬಂಧಪಟ್ಟಂತೆ ವಿಭಾಗ ಪತ್ರಕ್ಕೆ ಏನಾದರೂ ರುಜು ಹಾಕಿದ್ದೀರಾ ಎಂದರೆ ಸಾಕ್ಷಿ ಮೋಸದಿಂದ ಸಹಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. 10 ವರ್ಷಗಳ ಹಿಂದೆ ಮೋಸದಿಂದ ನನ್ನ ಸಹಿ ಪಡೆದಿರುತ್ತಾರೆ. ಮೋಸದಿಂದ ನನ್ನ ಸಹಿ ಪಡೆದಿರುತ್ತಾರೆ ಎಂದು ನಾನು ಯಾವುದೇ ಠಾಣೆಗೆ ದೂರು ಕೊಟ್ಟಿಲ್ಲ. ಈಗ ನಾನು ನೋಡುತ್ತಿರುವ ದಿನಾಂಕಃ 11.07.2018 ರ ವಿಭಾಗ ಪತ್ರದಲ್ಲಿರುವ ಹೆಬ್ಬೆಟ್ಟಿನ ಗುರುತು ನನ್ನದೇ ಎಂದರೆ ಸಾಕ್ಷಿ ಹೌದು ಈ ದಾಖಲಾತಿಗೆ ಮೋಸದಿಂದ ನನ್ನ ಹೆಬ್ಬೆಟ್ಟಿನ ಗುರುತು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ವಿಭಾಗದ ಪತ್ರದಲ್ಲಿಯ ಕ್ರಮ ಸಂಖ್ಯೆ 2 ರ ಪೋಟೋವನ್ನು ತೋರಿಸಲಾಗಿ ಆ ಪೋಟೋ ನನ್ನದೇ ಎಂದರೆ ಸಾಕ್ಷಿ ಅದು ನನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ವಿಬಾ,ಗ ಪತ್ರದಲ್ಲಿಯ 1ನೇ ಪುಟದಲ್ಲಿರುವ ಹೆಬ್ಬೆಟ್ಟಿನ ಗುರುತು ಮಾತ್ರ ನನ್ನದ್ದಾಗಿದ್ದು, ಉಳಿದ ಹೆಬ್ಬೆಟ್ಟಿನ ಗುರುತುಗಳು ನನ್ನದಲ್ಲ ಎಂದು ನುಡಿಯುತ್ತಾರೆ. ಹೆಬ್ಬೆಟ್ಟಿನ ಗುರುತನ್ನು ನಾನು ನಮ್ಮ ಮನೆಯಲ್ಲಿ ಹಾಕಿದ್ದೇನೆ. ಹೆಬ್ಬೆಟ್ಟಿನ ಗುರುತು ಹಾಕಿದ ನಂತರ ನಾನು ನೊಂದಣಿ ಕಚೇರಿಗೆ ಹೋಗಿಲ್ಲ.

ದಾವಾ ಐಟಂ ನಂ.4ಕ್ಕೆ ಸಂಬಂಧಪಟ್ಟಂತೆ ನಾನು ಪ್ರತಿವಾದಿಯರಿಂದ ರೂ. 10 ಸಾವಿರ ಗಳನ್ನು ಪಡೆದು ಅವರ ಹೆಸರಿಗೆ ವಿಭಾಗ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ನಾನು

ಪ್ರತಿವಾದಿಯರಿಂದ ಹಣ ಪಡೆದಿಲ್ಲ, ನನ್ನ ಮಗ ರಮೇಶ ಬಾಬು ಪ್ರತಿವಾದಿಯರಿಂದ ಹಣ ಪಡೆದಿರುತ್ತಾನೆ ಎಂದು ನುಡಿಯುತ್ತಾರೆ. ದಿನಾಂಕಃ 11.07.2018ರ ನೋಂದಾಯಿತ ವಿಭಾಗ ಪತ್ರದ ಬಾಬ್ತು ಪ್ರತಿವಾದಿಯರಿಂದ ದಾವಾ ಅನುಸೂಚಿ ಕ್ರಮ ಸಂಖ್ಯೆಃ 4 ಕ್ಕೆ ಸಂಬಂಧಿಸಿದಂತೆ ನಾನು 10 ಸಾವಿರ ರೂ.ಗಳನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೇ 4 ರ ವಿಸ್ತೀರ್ಣ ಪೂರ್ವ ಪಶ್ಚಿಮ 30 ಅಡಿ, ಉತ್ತರ ದಕ್ಷಿಣ 40 ಅಡಿ ಇಲ್ಲ, ಸುಳ್ಳು ವಿಸ್ತೀರ್ಣ ಬರೆಸಿದ್ದೇನೆ ಎಂದರೆ ಸರಿಯಲ್ಲ. ಕ್ರಮ ಸಂಖ್ಯೇ 4 ರ ಆಸ್ತಿಗೆ ಸಂಬಂಧಪಟ್ಟಂತೆ ಯಾವ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯಕ್ಕೆ ಯಾವ ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ, ನನ್ನ ಮಗನಿಗೆ ಗೊತ್ತು. ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನೇನು ಬರವಣಿಗೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಮ್ಮ ವಕೀಲರು ನನಗೆ ಓದಿ ಹೇಳಿಲ್ಲ, ನನ್ನ ಮಗನಿಗೆ ಓದಿ ಹೇಳಿದ್ದಾರೆ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.